## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 1835/2007 ದಿನಾಂಕ:11-12-2012ರ ಆದೇಶವನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 109 ವಿಸೇಬಿ 1996 ದಿನಾಂಕ:31-03-2006.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 71 ವಿಸೇಬಿ 2006 ದಿನಾಂಕ:05-02-2007.
3. ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ: 1835/2007 ದಿನಾಂಕ: 11/12/2012.

------

**ಪ್ರಸ್ತಾವನೆ:**

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು, ಮೋಘಾಮಂಡಲ ಪಂಚಾಯಿತಿಯಲ್ಲಿ ಜವಾಹರ್ ರೋಜಗಾರ್ ಯೋಜನೆಯಡಿಯಲ್ಲಿ ನಡೆದಿರುವ ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿದ್ದು, ಅವರುಗಳಿಗೆ ಮೇಲೆ ಓದಲಾದ ದಿನಾಂಕ:31-03-2006 ರ ಆದೇಶದಲ್ಲಿ ದಂಡನೆಯನ್ನು ವಿಧಿಸಲಾಗಿತ್ತು. ಸದರಿ ಆರೋಪಿತರಲ್ಲಿ ಒಬ್ಬರಾದ ಶ್ರೀ ಶಿವದೇವ ಶಾಸ್ತ್ರಿ, ಹಿಂದಿನ ಕ್ಷೇತ್ರಾಭಿವೃದ್ಧಿ ಅಧಿಕಾರಿ, ಚಿಂಚೋಳಿ ಇವರ ನಿವೃತ್ತಿ ಸೌಲಭ್ಯದ ಮೊತ್ತದಿಂದ ರೂ.43,777/-ಗಳ ಹಣವನ್ನು ಬಡ್ಡಿಸಹಿತ ವಸೂಲು ಮಾಡುವುದು ಮತ್ತು ಅವರ ನಿವೃತ್ತಿ ವೇತನದಲ್ಲಿ ಮಾಹೆಯಾನ ರೂ.100/-ನ್ನು 3 ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಲಾಗಿತ್ತು. ಶ್ರೀ ಶಿವದೇವ ಶಾಸ್ತ್ರಿ ರವರು ಅವರಿಗೆ ವಿಧಿಸಲಾಗಿದ್ದ ದಂಡನಾದೇಶದ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ಅವಕಾಶದನ್ವಯ ಘನತೆವೆತ್ತ ಕರ್ನಾಟಕ ರಾಜ್ಯಪಾಲರವರಿಗೆ ದಿನಾಂಕ:26-06-2006ರಲ್ಲಿ ಮೇಲ್ಮನವಿ ಸಲ್ಲಿಸಿ ಅವರಿಗೆ ವಿಧಿಸಲಾಗಿರುವ ದಂಡನೆಯನ್ನು ಕೈ ಬಿಡಲು ಕೋರಿದ್ದಾರೆ. ಅವರ ಮೇಲ್ಮನವಿಯು ದಿನಾಂಕ:16-12-2006 ರಲ್ಲಿ ತಿರಸ್ಕರಿಸಲ್ಪಟ್ಟಿದ್ದರಿಂದ ಸದರಿಯವರಿಗೆ ಆದೇಶ ಸಂಖ್ಯೆ: ಗ್ರಾಅಪ 109 ವಿಸೇಬಿ 96 ದಿನಾಂಕ: 31-03-2006 ರಲ್ಲಿ ಸರ್ಕಾರವು ವಿಧಿಸಿದ ದಂಡನೆಯನ್ನು ಉಲ್ಲೇಖ (2) ಆದೇಶದಲ್ಲಿ ಸ್ಥಿರೀಕರಿಸಲಾಗಿದೆ. ಈ ದಂಡನಾ ಆದೇಶದ ವಿರುದ್ಧ ಶ್ರೀ ಶಿವದೇವ ಶಾಸ್ತ್ರಿ, ಇವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 1835/2007 ನ್ನು ಸಲ್ಲಿಸಿದ್ದರು. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಈ ಅರ್ಜಿಯನ್ನು ಉಲ್ಲೇಖ (3) ದಿನಾಂಕ:11-12-2012 ರಂದು ಇತ್ಯರ್ಥಪಡಿಸಿ ಈ ಕೆಳಕಂಡಂತೆ ಆದೇಶಿಸಿದೆ.

> "We may also note in this case that the applicant has assailed the enquiry conducted in this case on the ground that the same is not done in conformity with CCA Rules. In this regard our attention is drawn to the copy of the enquiry report produced at Annexere-A7. On a perusal of the same and so also the averment in the reply statement of the respondent in this case in para 3 that the inquiry officer has submitted his report on 08-05-2001 after perusing the preliminary enquiry report and other documents/records pertaining to the matter, we have to agree with the argument made on behalf of the applicant that the inquiry pursuant to which the penalty imposed, has not been held in conformity with the provision of CCA Rules. this lacuna in the

proceedings held against the applicant vitiates the entire disciplinary proceedings.

In the result, the application is allowed. The impugned order bearing No.GraAaPa 109 ViSeBi 2006, dated 31.03.2006 (Annexure-A1) and the order bearing No.GraAaPa 71 ViSeBi 2006, dated 05.02.2007 ((Annexure-A12) are quashed. Recovery of the amount, if any, made already pursuant to the above said orders shall be refunded to the applicant within three months from the date of receipt of a copy of this order.''

ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಮೇಲಿನ ಆದೇಶದಂತೆ ಅರ್ಜಿದಾರರಿಗೆ ದಿನಾಂಕ:31-03-2006ರ ದಂಡನಾದೇಶದಲ್ಲಿ ವಿಧಿಸಲಾಗಿದ್ದ ದಂಡನೆಯನ್ನು ಹಿಂಪಡೆಯಲು ಮತ್ತು ಅವರಿಂದ ವಸೂಲು ಮಾಡಲಾಗಿರುವ ಮೊತ್ತವನ್ನು ಹಿಂದಿರುಗಿಸಲು ನಿರ್ಣಯಿಸಿ ಈ ಮುಂದಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 66 ವಿಸೇಬಿ 2007 ಬೆಂಗಳೂರು ದಿನಾಂಕ: 19-08-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಶ್ರೀ ಶಿವದೇವ ಶಾಸ್ತ್ರಿ, ಹಿಂದಿನ ಕ್ಷೇತ್ರಾಭಿವೃದ್ಧಿ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿಂಚೋಳಿ, ಗುಲ್ಬರ್ಗಾ ಜಿಲ್ಲೆ. ಇವರಿಗೆ ಗ್ರಾಅಪ 109 ವಿಸೇಬಿ 1996 ದಿನಾಂಕ:31-03-2006ರ ಆದೇಶದಲ್ಲಿ ವಿಧಿಸಲಾಗಿರುವ ದಂಡನೆಯನ್ನು ರದ್ದುಪಡಿಸಿದೆ. ಒಂದು ವೇಳೆ ಅವರ ನಿವೃತ್ತಿ ವೇತನ ಸೌಲಭ್ಯದಿಂದ ಹಣವನ್ನು ಈಗಾಗಲೇ ವಸೂಲು ಮಾಡಿದ್ದಲ್ಲಿ ಅದನ್ನು ಅರ್ಜಿದಾರರಿಗೆ ಹಿಂದಿರುಗಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಬಿ.ರಘುನಾಥ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ. ಬೆಂಗಳೂರು.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಗುಲ್ಬರ್ಗಾ.
4) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ,ಪಾರ್ಕ್ ಹೌಸ್ ಬೆಂಗಳೂರು.
5) ಸಂಬಂಧಪಟ್ಟ ಅಧಿಕಾರಿಗಳಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಗುಲ್ಬರ್ಗಾ ರವರ ಮುಖಾಂತರ).
6) ಜಿಲ್ಲಾ ಖಜಾನೆ ಅಧಿಕಾರಿ, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ.
7) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್)/ಅಪರ ಕಾರ್ಯದರ್ಶಿ (ಆಡಳಿತ), ಗ್ರಾ.ಅ. & ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
8) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

GOs